ದಿಃ13.04.2022 ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಮಾನ್ಯ ಡಿಜಿಪಿರವರಿಂದಃ ಪ್ರತಿ ಅರ್ಜಿದಾರರ ಪರವಾಗಿಃ</u>

ಸರ್ವೆ ನಂಬರ್.39/1 ರ ಆರ್‌ಟಿಸಿ ನನ್ನ ಮತ್ತು ನನ್ನ ಸಹೋದರರ ಹೆಸರಿನಲ್ಲಿ ಜಂಟಿಯಾಗಿರುತ್ತದೆ ಎನ್ನುವುದು ಸರಿ. ಸಾಕ್ಷಿ ಮುಂದುವರಿದು ನನ್ನ ಸಹೋದರರು ಪ್ರಕರಣ ನಡೆಸಲು ನನಗೆ ಸಮ್ಮತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಒಪ್ಪಿಗೆ ಪತ್ರ ಪಡೆದ ಬಗ್ಗೆ ನನ್ನ ಅರ್ಜಿಯಲ್ಲಾಗಲೀ, ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಹೇಳಿಲ್ಲ ಎನ್ನುವುದು ಸರಿ.

2. ಸರ್ವೆ ನಂಬರ್.39/1 ನ್ನು ನನ್ನ ತಂದೆ ಖರೀದಿಸಿದ್ದು ಪಿತ್ರಾರ್ಜಿತವಾಗಿ ನನಗೆ ಬಂದಿರುತ್ತದೆ. ಅದರಂತೆ ನನ್ನ ಸಹೋದರರಿಗೂ ಸದರಿ ಜಮೀನಿನಲ್ಲಿ ಹಕ್ಕುಇರುತ್ತದೆ ಎನ್ನುವುದು ಸರಿ. ನನ್ನ ಸಹೋದರರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎನ್ನುವುದು ಸರಿ. ನಾವು 4 ಜನ ಅಣ್ಣ-ತಮ್ಮದಿರು ಇರುತ್ತೇವೆ, ಸಹೋದರಿಯರು ಇಲ್ಲ.

3. ನಮ್ಮ ಜಮೀನು ಗ್ರಾಮಠಾಣಾಕ್ಕೆ ಹೊಂದಿಕೊಂಡಂತೆ ಇರುತ್ತದೆ ಎಂದು ತೋರಿಸಲು ದಾಖಲೆಗಳನ್ನು

ಹಾಜರುಪಡಿಸಿರುತ್ತೇನೆ. ನಾನು ಪಂಚಾಯ್ತಿಯಿಂದ ಗ್ರಾಮಠಾಣಾ ಜಮೀನು ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ಸರಿ.

4. ನಾನು ಈ ಪ್ರಕರಣದಲ್ಲಿ ಸ್ವಾಧೀನಗೊಂಡ ಭೂಮಿಗೆ ಕಾನೂನುಬದ್ದ ಮಾರುಕಟ್ಟೆ ಬೆಲೆಯನ್ನು ಸ್ವೀಕರಿಸಿರುತ್ತೇನೆ ಎನ್ನುವುದು ಸರಿಯಲ್ಲ. ನಮ್ಮ ಜಮೀನಿಗೆ ಅಕ್ಕಪಕ್ಕದ ಜಮೀನುಗಳ ಮಾರುಕಟ್ಟೆ ಮೌಲ್ಯ ಆಧರಿಸಿ ನನಗೆ ಪರಿಹಾರ ನೀಡಲಾಗಿರುತ್ತದೆ ಎನ್ನುವುದು ಸರಿಯಲ್ಲ.

5. ನಾನು ಹಾಜರುಪಡಿಸಿರುವ ಕ್ರಯಪತ್ರ 1 ಗುಂಟೆಗೆ ಸಂಬಂಧಪಟ್ಟಿರುತ್ತದೆ ಎನ್ನುವುದು ಸರಿ. ಭೂಸ್ವಾಧೀನವಾಗಿರುವ ನಮ್ಮ ಸ್ವತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಆಗಿರುತ್ತದೆ ಎನ್ನುವುದು ಸರಿ.

6. ನಾನು ಈ ಪ್ರಕರಣದಲ್ಲಿ ನೀಡಿರುವ ಪರಿಹಾರ ಮತ್ತು ಮಾರುಕಟ್ಟೆ ಬೆಲೆ ಸರಿ ಇಲ್ಲ ಎಂದು ತಕರಾರು ಮತ್ತು ಅರ್ಜಿ ನೀಡಿರುತ್ತೇನೆ. ಸದರಿ ತಕರಾರಿನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನಮ್ಮ ಜಮೀನು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎನ್ನುವುದು ಸರಿ.

7. ನಮ್ಮ ಜಮೀನು ಭೂಪರಿವರ್ತನೆ ಆಗಿಲ್ಲ ಎಂದರೆ ಸರಿ. ನಮ್ಮ ಜಮೀನಿನ ಅಕ್ಕಪಕ್ಕ ಭೂಪರಿವರ್ತನೆ ಆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಕಾನೂನುಬದ್ದ ಪರಿಹಾರ ಪಡೆದಿದ್ದರೂ ಹೆಚ್ಚಿನ ಪರಿಹಾರಕ್ಕೆ ಅರ್ಹನಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹೆಚ್ಚಿನ ಪರಿಹಾರದ ಉದ್ದೇಶದಿಂದ ಸೃಷ್ಟಿತ ದಾಖಲೆಗಳ ಮೂಲಕ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.